ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಬೀದರ್ ಜಿಲ್ಲೆಯ ಕಾರಂಜಾ ಜಲಾಶಯ ಬಗ್ಗೆ

ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :-

1235 (1554) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಿಗೆ ಕಾರಂಜಾ ಜಲಾಶಯದಿಂದ ನೀರು ನೀಡಲಾಗುತ್ತದೆ ;

(ಆ) ಯಾವ ಉದ್ದೇಶಕ್ಕೆ ನೀಡಲಾಗುತ್ತದೆ ; ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಬೆಳೆಗೆ ನೀರು ಕೊಡಲಾಗುವುದು ; ಅಥವಾ ಇನ್ನಿತರ ಬೆಳೆಗೆ ಎಷ್ಟು ಪ್ರದೇಶಕ್ಕೆ ನೀರು ಕೊಡಲಾಗುತ್ತದೆ ;

(ಇ) ಕುಡಿಯುವ ನೀರಿಗಾಗಿ ಯಾವ ಯಾವ ತಾಲ್ಲೂಕಿನ ನಗರಗಳಿಗೆ ಎಷ್ಟೆಷ್ಟು ನೀರು ಕೊಡಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಹೊಸದಾಗಿ ಕುಡಿಯುವ ನೀರಿಗೆ ಗ್ರಾಮಾಂತರ ಹಾಗೂ ನಗರಗಳಿಂದ ಬಂದಿರುವ ಬೇಡಿಕೆಗಳೆಷ್ಟು ; ಎಷ್ಟು ಮಂಜೂರು ಮಾಡಲಾಗಿದೆ ;

(ಉ) ತಡೆ ಹಿಡಿಯಲಾಗಿರುವ ಬೇಡಿಕೆಗಳಾವುವು ; ತಡೆಹಿಡಿಯಲು ಕಾರಣವೇನು ? (ವಿವರ ನೀಡುವುದು)